ಹೇಳಿಯೇ ಬಿಡುತ್ತೇನೆ. ಕಡುಬಡತನದಿಂದ ಕೂಡಿ, ಏಕಾಂಗಿಯಾಗಿದ್ದ ಅವರು ಕೆಲವಾರು ಪುಸ್ತಕಗಳನ್ನು ಬರೆದಿದ್ದರು. ಪುಸ್ತಕ ಬರೆಯುವವರು, ಕಲೆಗಾರರು ಸಾಮಾನ್ಯವಾಗಿ ಬಡವರ್ಗದಿಂದ ಬಂದವರೇ ಆಗಿರುತ್ತಾರೆ, ಅಲ್ಲವೆ? ಯಾಕೆಂದರೆ, ಅವರಿಗೆ ಕಷ್ಟಗಳನ್ನು ತೋಡಿಕೊಳ್ಳುವುದಕ್ಕೆ, ತಮ್ಮ ಆಸೆ ಆಕಾಂಕ್ಷೆಗಳನ್ನು ಹೇಳಿಕೊಳ್ಳುವುದಕ್ಕೆ ಅದೊಂದು ಉತ್ತಮ ಅಭಿವ್ಯಕ್ತಿ ಮಾರ್ಗವೇ ಆಗಿದೆ. ಹಾಗೆ ನನ್ನ ಗೆಳೆಯನು. ಗೆಳೆಯ ಬರೆದ ಪುಸ್ತಕಗಳು ಹೇಗೊ ಅಚ್ಚಿನ ಮನೆಯನ್ನೂ ಕಂಡಿದ್ದವು. ಅವರ ಹಣಕಾಸಿನ ಪರಿಸ್ಥಿತಿ ಉತ್ತಮವಾಗಲೆಂಬ ಸದಾಶಯದಿಂದ ವಿಶ್ವವಿದ್ಯಾಲಯವೊಂದರ ಪ್ರಾಧ್ಯಾಪಕರು ಮುತುವರ್ಜಿ ವಹಿಸಿ ಅವರದೊಂದು ಪುಸ್ತಕವನ್ನು ಬಿ.ಎ. ತರಗತಿಗೆ ಪಠ್ಯವನ್ನಾಗಿ ಮಾಡಿಸಿದರು. ನನ್ನ ಸಾಹಿತಿ ಗೆಳೆಯರನ್ನು ಸದ್ಯಕ್ಕೆ 'ರೂ' ಎಂದು ನಾಮಕರಣ ಮಾಡೋಣ. ಅವರು ಪಠ್ಯ ಪುಸ್ತಕವನ್ನು ತಾವೇ ಪ್ರಕಟಿಸಿ, ಮಾರಾಟ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಂಡರು. ಹಾಗೆ ಮಾಡಿದರೆ, ತಮಗೆ ನಾಲ್ಕು ಕಾಸು ಹೆಚ್ಚಿಗೆ ಸಿಗಬಹುದೆಂಬ ಒಂದೇ ಆಸೆ, ಹಾಗಾಗಿ 'ರೂ' ಅವರು ತಮಗೆ ಬಂದ ವಿಶ್ವವಿದ್ಯಾಲಯದ ಆರ್ಡರನ್ನು ಹಿಡಿದುಕೊಂಡು, ಪುಸ್ತಕ ಮುದ್ರಣಕ್ಕೆ ಬೇಕಾದ ಪೇಪರನ್ನು ಪರಿಚಯದ ಅಂಗಡಿಯಿಂದ 'ರೂ' ಅವರು ಕಡ ತಂದರು. ಬಳಿಕ ಅವರು ಅವರ ಬಗ್ಗೆ ಸಹಾನುಭೂತಿ ಹೊಂದಿದ್ದ ಒಬ್ಬ ಮುದ್ರಕರ ಬಳಿ ಹೋದರು. ಅನುಕೂಲಕ್ಕಾಗಿ ಅವರನ್ನು 'ವಾ' ಎಂದು ಹೆಸರಿಸೋಣ. 'ವಾ' ಅವರಿಗೆ ತಮಗೆ ಬಂದ ಆರ್ಡರನ್ನು ತೋರಿಸಿ, ಪಠ್ಯ ಪುಸ್ತಕವನ್ನು ಅವರು ಮುದ್ರಿಸಿಕೊಡಬೇಕೆಂದೂ, ಮುದ್ರಣದ ಬಾಬ್ತನ್ನು ತಮಗೆ ಹಣ ಬಂದ ಅನಂತರ ತೆಗೆದುಕೊಳ್ಳಬೇಕೆಂತಲೂ ಒಪ್ಪಿಸಿದರು. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಮುದ್ರಣದ ಸಾಲ ಮಾಡಿದರು. ಆ ಬಳಿಕ, ಅಚ್ಚಾದ ಪುಸ್ತಕಗಳನ್ನು ಒಬ್ಬ ಪುಸ್ತಕ ವ್ಯಾಪಾರಿಗೆ ಸಗಟಾಗಿ ಮಾರಿದರು. ಅದರಿಂದ 'ರೂ' ಅವರಿಗೆ ಮೂವತ್ತೈದು ಸಾವಿರ ರೂಪಾಯಿಗಳು ಬಂದವು. ಈಗ್ಗೆ ನಲವತ್ತು ವರ್ಷಗಳ ಹಿಂದೆ ನಿಜಕ್ಕೂ ಆ ಹಣ ಒಂದು ದೊಡ್ಡ ಮೊತ್ತವೇ ಆಗಿತ್ತು. 'ರೂ' ಅವರಿಗೆ ಹಣ ಬಂದ ಸುದ್ದಿ 'ವಾ' ಅವರಿಗೆ ತಲುಪುತ್ತಿದ್ದ ಹಾಗೆಯೇ ಅವರು ಅವರಲ್ಲಿಗೆ ಹೋಗಿ, 'ಸ್ವಾಮಿ, ತಮಗೆ ಪುಸ್ತಕ ಮಾರಾಟದಿಂದ ಹಣ ಬಂತೆಂದು ತಿಳಿಯಿತು. ಬಹಳ ಸಂತೋಷ. ಪುಸ್ತಕದ ಪ್ರಿಂಟಿಂಗ್ ಬಿಲ್ಲು ಆರು ಸಾವಿರ ರೂಪಾಯಿಗಳಾಗಿವೆ. ಅದನ್ನು ಕೊಡಿ' ಅಂತ ಸಜ್ಜನಿಕೆಯಿಂದಲೇ ಕೇಳಿದರು. ಅದನ್ನು ಕೇಳಿ 'ರೂ' ಅವರು ಕ್ಷಣಕಾಲ ಮೌನ ಧರಿಸಿ, ಆಮೇಲೆ ಗಂಭೀರವಾಗಿ, 'ನೋಡಿ ವಾ ಅವರೆ, ನನಗೆ ಹಣ ಬಂದಿರುವುದು ನಿಜ. ನಿಮಗೆ ಪುಸ್ತಕದ ಪ್ರಿಂಟಿಂಗ್ ಬಾಬ್ತು ಆರು ಸಾವಿರ ಕೊಡಬೇಕು. ಪೇಪರ್‌ನವರಿಗೆ ಎಂಟು ಸಾವಿರ ಕೊಡಬೇಕು. ನಾನಿದುವರೆಗೆ ಊಟ ಮಾಡಿದ ಹೋಟೆಲ್ ಬಿಲ್ಲು ಎರಡೂವರೆ ಸಾವಿರ. ಅದನ್ನೂ ಕೊಡಬೇಕು. ನಾನಿರುವ ರೂಮಿಗೆ ಮೂರು ವರ್ಷದಿಂದ ಬಾಡಿಗೆ ಕೊಟ್ಟಿಲ್ಲ. ಅದನ್ನೂ ಕೊಡಬೇಕು. ಇನ್ನೂ ಕೆಲವಾರು ಕೈ ಸಾಲಗಳೂ ಇವೆ. ಹೀಗೆ, ಎಲ್ಲರ ಸಾಲ ಚುಕ್ತಾ ಮಾಡಿದ ಮೇಲೆ ನನಗೇನು ಉಳಿಯುತ್ತೆ? ಜೀವನ ಮಾಡೋಕ್ಕೆ ಮತ್ತೆ ನಿಮ್ಮ ಹತ್ತಿರವೇ ಸಾಲ ಮಾಡಬೇಕಾಗಿ ಬರುತ್ತೆ. ಆಗ, ನೀವು ಇಲ್ಲ ಅಂತ ಹೇಳೋಕ್ಕೆ ಬೇಸರ ಮಾಡ್ಕೊತೀರಿ. ನಾನು ಪರದಾಡಬೇಕಾಗುತ್ತೆ. ಆ ತಾಪತ್ರಯ ಎಲ್ಲ ಬೇಡ ಅಂತ ನಾನೊಂದು ನಿರ್ಧಾರಕ್ಕೆ ಬಂದಿದ್ದೀನಿ. ಈಗ ಬಂದಿರೋ ಹಣದಲ್ಲಿ ನಿಮಗ್ಯಾರಿಗೂ ಸಾಲ ತೀರಿಸ್ಬಾರ್ದು. ಮುಂದಿನ ಸಾರಿ ಹಣ ಬಂದಾಗ ತೀರ್ಸೋದು' ಅಂತ ಅತ್ಯಂತ ತರ್ಕಬದ್ಧವಾಗಿ ತಮ್ಮ ವಾದವನ್ನು ಮಂಡಿಸಿದರು. ಅವರ ವಾದಕ್ಕೆ ಸಾತ್ವಿಕ ಮನದವರಾದ 'ವಾ' ಅವರು ಕಕ್ಕಾಬಿಕ್ಕಿಯಾದರು. ಆಮೇಲೆ ಸುಧಾರಿಸಿಕೊಂಡು, 'ಸರಿ ಸ್ವಾಮಿ, ಇದೊಳ್ಳೆ ನ್ಯಾಯ ಆಯ್ತು' ಅಂತಂದು, ಕ್ಷಣಕಾಲ ಮೌನಧಾರಿಗಳಾಗಿ, ಬಳಿಕ ಅದನ್ನು ಮುರಿದು 'ಆದ್ರೆ, ಮುಂದೆ ಯಾವತ್ತೂ ನಮ್ಮ ಪ್ರೆಸ್ಸಿಗೆ ಮಾತ್ರ ಬರಬೇಡಿ' ಅಂತ ಇದ್ದುದರಲ್ಲಿಯೇ ಕಠಿಣವಾಗಿ ಹೇಳಿ, ಪೆಚ್ಚಾಗಿ ಜಾಗ ಖಾಲಿ ಮಾಡಿದರು. ನನಗನ್ನಿಸುತ್ತೆ 'ರೂ' ಅವರು ತಮ್ಮ ತಂತ್ರ